# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ರಾಮನಗರ ಜಿಲ್ಲೆಯ ಗ್ರಾಮಗಳ ಪಟ್ಟಿಗೆ ಅನುಮೋದನೆ ಕುರಿತು.

ಓದಲಾಗಿದೆ: 1.ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:29.06.2012
2.ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:04.07.2012
3.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ರಾಮನಗರ ಇವರ ಪತ್ರ ಸಂಖ್ಯೆ:ರಾಜಿಪಂ/ಸು.ಗ್ರಾ.ಸಿ.ಆರ್.79/2011-12 ದಿ:23.08.2012.

**ಪ್ರಸ್ತಾವನೆ:**

2012-13ನೇ ಸಾಲಿನ ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ 1000 ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. 5ನೇ ಹಂತದ ಯೋಜನೆಯ ಅನುಷ್ಠಾನ ಮಾಡುವ ಬಗ್ಗೆ, ಗ್ರಾಮಗಳ ಆಯ್ಕೆ, ಅನುದಾನ ಹಂಚಿಕೆ ಇತ್ಯಾದಿ ವಿಷಯಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ಮೇಲೆ ಓದಲಾದ (1) ಮತ್ತು (2)ರ ಸರ್ಕಾರದ ಆದೇಶ ಹಾಗೂ ಸುತ್ತೋಲೆಯನ್ನು ಹೊರಡಿಸಲಾಗಿದೆ. ಅದರನ್ವಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ ಇವರು ನಿಯಮಾನುಸಾರ ಶಾಸಕರ ಶಿಫಾರಸಿನೊಂದಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದಿಸಲ್ಪಟ್ಟ ಕನಕಪುರ ತಾಲ್ಲೂಕಿನ 24 ಗ್ರಾಮಗಳು, ಚನ್ನಪಟ್ಟಣ ತಾಲ್ಲೂಕಿನ 6 ಗ್ರಾಮಗಳು, ರಾಮನಗರ ತಾಲ್ಲೂಕಿನ 11 ಗ್ರಾಮಗಳು ಮತ್ತು ಮಾಗಡಿ ತಾಲ್ಲೂಕಿನ 18 ಗ್ರಾಮಗಳು ಒಟ್ಟು 59 ಗ್ರಾಮಗಳ ಪಟ್ಟಿಯನ್ನು ಅನುಮೋದನೆ ನೀಡಲು ಓದಲಾಗಿದೆ (3)ರ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ನಿಯಮಗಳನ್ವಯ ಪರಿಶೀಲಿಸಿದ್ದು, ಆಯ್ಕೆ ಪಟ್ಟಿಯನ್ನು ಅಧಿಕೃತವಾಗಿ ಹೊರಡಿಸಲು ಸರ್ಕಾರಿ ಆದೇಶದ ಅಗತ್ಯವಿದೆ. ಅನುಬಂಧದಲ್ಲಿರುವ ಕನಕಪುರ ತಾಲ್ಲೂಕಿನ 24 ಗ್ರಾಮಗಳು, ಚನ್ನಪಟ್ಟಣ ತಾಲ್ಲೂಕಿನ 6 ಗ್ರಾಮಗಳು, ರಾಮನಗರ ತಾಲ್ಲೂಕಿನ 11 ಗ್ರಾಮಗಳು ಮತ್ತು ಮಾಗಡಿ ತಾಲ್ಲೂಕಿನ 18 ಗ್ರಾಮಗಳು ಒಟ್ಟು 59 ಗ್ರಾಮಗಳಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:89:ಸುಗ್ರಾಯೋ:2012. ಬೆಂಗಳೂರು, ದಿನಾಂಕ:01.09.2012**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ರಾಮನಗರ ಜಿಲ್ಲೆಯ 4 ತಾಲ್ಲೂಕುಗಳ 59 ಗ್ರಾಮಗಳಿಗೆ ಅನುಬಂಧದಲ್ಲಿ ನಮೂದಿಸಿರುವಂತೆ ಸದರಿ ಗ್ರಾಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಅನುಷ್ಠಾನಗೊಳಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಆದೇಶಿಸಿದೆ.

1. ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ ಹಾಗೂ ಉಲ್ಲೇಖ (2)ರ ಸುತ್ತೋಲೆಯಲ್ಲಿ ಹೊರಡಿಸಲಾದ ಯೋಜನಾ ಮಾರ್ಗಸೂಚಿ ಪ್ರತಿ ಗ್ರಾಮಕ್ಕೆ ಸಂಬಂಧಿಸಿದಂತೆ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಅನುಮೋದನೆ ನೀಡಿ ಕಾರ್ಯಗತಗೊಳಿಸುವುದು.
2. ಸರ್ಕಾರಿ ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-1ರಲ್ಲಿ ಸೂಚಿಸಿದ ತಾಲ್ಲೂಕುವಾರು ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಕಾರ್ಯಕ್ರಮವನ್ನು ಕೈಗೊಳ್ಳುವುದು.
3. ಗ್ರಾಮವಾರು ಅನುದಾನವನ್ನು ನಿಗದಿಪಡಿಸುವಾಗ ಗ್ರಾಮದ ಜನಸಂಖ್ಯೆಗನುಗುಣವಾಗಿ ತಲಾನುದಾನ ನಿಯಮಕ್ಕೆ ತಕ್ಕಂತೆ ನಿಗದಿಪಡಿಸಿಕೊಳ್ಳತಕ್ಕದ್ದು.
4. ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-2ರ ವೇಳಾಪಟ್ಟಿಗನುಗುಣವಾಗಿ ಕಾರ್ಯಾನುಷ್ಠಾನ ಮಾಡುವುದು.
5. ಆಯ್ಕೆಯಾದ ಗ್ರಾಮಗಳು ಈ ಯೋಜನೆಯ ಹಿಂದಿನ ಹಂತದಲ್ಲಿ ಆಯ್ಕೆಯಾಗಿಲ್ಲದಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

1/9/12

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು(ಸು.ಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಮನಗರ.
2. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ರಾಮನಗರ.
3. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಉಪ ಮುಖ್ಯ ಮಂತ್ರಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿ ಮತ್ತು ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ.
6. ಸಂಕಲನಕಾರರು, ರಾಜ್ಯಪತ್ರ, ಬೆಂಗಳೂರು.
7. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
8. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
9. ಸಂಪಾದಕರು, ಕರ್ನಾಟಕ ವಿಕಾಸ, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು
10. ಹೆಚ್ಚುವರಿ.

# ಅನುಬಂಧ

ರಾಮನಗರ ಜಿಲ್ಲೆಯ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಅಭಿವೃದ್ಧಿಗೊಳಿಸಿರುವ ಗ್ರಾಮಗಳು

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:89:ಸುಗ್ರಾಯೋ:2012, ದಿನಾಂಕ:01.09.2012

ಜಿಲ್ಲೆ: ರಾಮನಗರ

| ಕ್ರ.ಸಂ. | ತಾಲ್ಲೂಕು | ಕ್ರ.ಸ. | ಗ್ರಾಮಗಳ ಹೆಸರು | 2001ರ ಜನಗಣತಿ ಪ್ರಕಾರ ಜನಸಂಖ್ಯೆ | ನಿಗದಿಪಡಿಸಬೇಕಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | ಕನಕಪುರ | 1 | ಕಲ್ಲಹಳ್ಳಿ | 1627 | 40.80 |
| | | 2 | ಕೆರಳಾಳುಸಂದ್ರ | 1424 | 35.71 |
| | | 3 | ವಿರೂಪಸಂದ್ರ | 1754 | 43.98 |
| | | 4 | ಟಿ.ಬೇಕುಪ್ಪೆ | 2192 | 54.97 |
| | | 5 | ತಿಗಳರ ಹೊಸಹಳ್ಳಿ | 1780 | 44.63 |
| | | 6 | ಹೊರಳಗಲ್ಲು | 2557 | 64.12 |
| | | 7 | ಅಚ್ಚಲು | 2411 | 60.46 |
| | | 8 | ಚೂಡಹಳ್ಳಿ | 2692 | 67.50 |
| | | 9 | ಗೇರಹಳ್ಳಿ | 1678 | 42.08 |
| | | 10 | ಗಂಗನಹಳ್ಳಿ | 799 | 20.04 |
| | | 11 | ಹುಣಸನಕೋಡಿಹಳ್ಳಿ | 722 | 18.10 |
| | | 12 | ತಟ್ಟಗುಪ್ಪೆ | 644 | 16.15 |
| | | 13 | ಕಾಡಹಳ್ಳಿ | 1150 | 28.84 |
| | | 14 | ರಾಂಪುರ | 1166 | 29.24 |
| | | 15 | ಅಗ್ರಹಾರ | 411 | 10.31 |
| | | 16 | ಸೂರನಹಳ್ಳಿ | 467 | 11.71 |
| | | 17 | ಕೊಳ್ಳಿಗಾನಹಳ್ಳಿ ಅಣೆದೊಡ್ಡಿ | 2420 | 60.68 |
| | | 18 | ಮರಸರಹಳ್ಳಿ | 646 | 16.20 |
| | | 19 | ಟಿ.ಹೊಸಹಳ್ಳಿ | 1338 | 33.55 |
| | | 20 | ಅವರೆಮಾಳ | 2247 | 56.34 |
| | | 21 | ಮಾರಸಂದ್ರ | 671 | 16.83 |
| | | 22 | ಅರಟಬಲೆ | 886 | 22.22 |
| | | 23 | ಗೊತ್ತಲಹುಣಸೆ | 730 | 18.31 |
| | | 24 | ಮಾವತ್ತೂರು | 728 | 18.25 |
| | | | **ಒಟ್ಟು** | **33140** | **831.00** |
| 2 | ಚನ್ನಪಟ್ಟಣ | 1 | ಸೆಣಬನಹಳ್ಳಿ/ಮೊಳೆದೊಡ್ಡಿ | 2271 | 58.54 |
| | | 2 | ಮಾಕಳಿ | 2874 | 74.08 |
| | | 3 | ಕೂಡ್ಲೂರು | 3228 | 83.21 |
| | | 4 | ದೊಡ್ಡಮಳೂರು/ಬೈರಾಪಟ್ಟಣ | 6175 | 159.17 |
| | | 5 | ತಗಚಕೆರೆ | 2809 | 72.41 |
| | | 6 | ಸೋಗಾಲ | 3670 | 94.60 |
| | | | **ಒಟ್ಟು** | **21027** | **542.00** |

| | | | | | |
|---|---|---|---|---|---|
| 3 | ರಾಮನಗರ | 1 | ಅಣ್ಣಹಳ್ಳಿ | 1214 | 28.92 |
| | | 2 | ಬೊಮ್ಮಚನಹಳ್ಳಿ | 1659 | 39.52 |
| | | 3 | ಅಚ್ಚಲು | 1688 | 40.22 |
| | | 4 | ಕೇತೋಹಳ್ಳಿ | 2321 | 55.30 |
| | | 5 | ಲಕ್ಷ್ಮೀಪುರ | 1542 | 36.74 |
| | | 6 | ದಣಾಯಕನಪುರ | 1095 | 26.09 |
| | | 7 | ದೊಡ್ಡಗಂಗವಾಡಿ | 1874 | 44.65 |
| | | 8 | ಕೋಡಿಯಾಲ ಕರೇನಹಳ್ಳಿ | 2602 | 61.99 |
| | | 9 | ಬಾನಂದೂರು | 3283 | 78.22 |
| | | 10 | ಹೆಗ್ಗಡಗೆರೆ | 1226 | 29.21 |
| | | 11 | ವಡೇರಹಳ್ಳಿ | 636 | 15.15 |
| | | | **ಒಟ್ಟು** | **19140** | **456.00** |
| 4 | ಮಾಗಡಿ | 1 | ದೊಡ್ಡಸೋಮನಹಳ್ಳಿ | 999 | 25.32 |
| | | 2 | ಚಿಕ್ಕಹಳ್ಳಿ | 1273 | 32.26 |
| | | 3 | ಸಂಕೀಘಟ್ಟ | 836 | 21.18 |
| | | 4 | ನಾರಸಂದ್ರ | 1770 | 44.85 |
| | | 5 | ಕಾಗಿಮಡು | 853 | 21.62 |
| | | 6 | ದುಬ್ಬಘಟ್ಟಿಗೆ | 1043 | 26.43 |
| | | 7 | ಹಲಸಬೆಲೆ | 918 | 23.26 |
| | | 8 | ಅಜ್ಜನಹಳ್ಳಿ | 1552 | 39.33 |
| | | 9 | ತಗಚಗುಪ್ಪೆ/ಪೋಲೋಹಳ್ಳಿ | 553 | 14.01 |
| | | 10 | ಶ್ರೀಪತಿಹಳ್ಳಿ | 1019 | 25.82 |
| | | 11 | ನೇರಲವಾಡಿ | 915 | 23.19 |
| | | 12 | ಎಸ್.ಬ್ಯಾಡರಹಳ್ಳಿ | 495 | 12.54 |
| | | 13 | ಸೀಗೇಕುಪ್ಪೆ | 733 | 18.57 |
| | | 14 | ಹುಲ್ಲೇನಹಳ್ಳಿ | 1337 | 33.88 |
| | | 15 | ಭಗಿನಗೆರೆ | 867 | 21.97 |
| | | 16 | ಕಲ್ಕೆರೆ | 685 | 17.36 |
| | | 17 | ಸೋಲೂರು | 3470 | 87.93 |
| | | 18 | ಬಿಟ್ಟಸಂದ್ರ | 729 | 18.47 |
| | | | **ಒಟ್ಟು** | **20047** | **508.00** |
| | | | **ಜಿಲ್ಲೆಯ ಒಟ್ಟು ಮೊತ್ತ** | **93354** | **2337.00** |

**(ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು (ಸುಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ